**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 95/2020**

**ಚಾ.ಸಾಃ 2, ಪ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಅಬ್ದುಲ್ ಮುನಾಫ್ ಶೇಖ್ |
| ತಂದೆಯ ಹೆಸರು | ಅಬ್ದುಲ್ ಲೋಫ್ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ಆಟೋ ಚಾಲಕ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 24-03-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2(ಎ)ಎಂದು ಗುರುತಿಸಲಾಯಿತು.

ಅದೇ ರೀತಿ ಸಾಕ್ಷಿಗೆ ಗುನ್ನಾ ಸ್ಥಳದ ಪಂಚನಾಮೆ ಸಂದರ್ಭದಲ್ಲಿ ತೆಗೆಸಲಾಗಿದೆ ಎಂದು ಹೇಳುವ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿದ್ದರಿಂದ ಸದರಿ ಛಾಯಾಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳಲ್ಲಿ ನಾನು, ಚಾಸಾ-3 ಮಹ್ಮದ್ ಆಸಿಫ್, ಚಾಸಾ-1 ಮೊಹಿದ್ದಿನ್ ಇಮಾಮ್ ಶೇಖ್ ಮತ್ತು ಪೋಲಿಸರು ಇರುತ್ತಾರೆ.

ಸದರಿ ಸಹಿಯನ್ನು ದಿನಾಂಕ 26-01-2019 ರಂದು ಹೊನ್ನಾವರ ಪಟ್ಟಣದ ಅಶೂರ್ ಖಾನಾಗಲ್ಲಿಯಲ್ಲಿರುವ ಚಾಸಾ-1 ರವರ ಮನೆಯ ಬಳಿ ಮಾಡಿರುತ್ತೇನೆ. ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದು ಪೋಲೀಸರು ಅಲ್ಲಿಗೆ ಬಂದು ಪಂಚನಾಮೆ ಮಾಡಿರುತ್ತಾರೆ. ಚಾಸಾ-1 ರವರು ಮಲಗುವ ಕೋಣೆಯಲ್ಲಿದ್ದ ಎರಡು ಗೋಡ್ರೇಜ್ ಅಲ್ಮೆರಾಗಳನ್ನು ತೋರಿಸಿರುತ್ತಾರೆ. ಅವುಗಳಲ್ಲಿ ಇದ್ದ ಇಸ್ತ್ರಿ ಪೆಟ್ಟಿಗೆ, ವಾಚು, ಸೀರೆ, ಬಂಗಾರದ ಆಭರಣಗಳು ಇತ್ಯಾದಿಗಳು ಕಳ್ಳತನವಾಗಿರುವುದಾಗಿ ಚಾಸಾ-1 ಪೋಲಿಸರಿಗೆ ತಿಳಿಸಿರುತ್ತಾರೆ. ಪೋಲಿಸರು ಪಂಚನಾಮೆಯನ್ನು ಜರುಗಿಸಿ ಬರೆದುಕೊಂಡು ಓದಿ ಹೇಳಿ ನನ್ನ ಸಹಿ ಪಡೆದು ಛಾಯಾಚಿತ್ರಗಳನ್ನು ತೆಗೆಸಿದರು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಚಾಸಾ-1 ರವರು ನನಗೆ ಸಂಬಂಧಿಕರಲ್ಲ. ಅವರ ಮನೆಯ ಎದುರು ನನ್ನ ಮನೆ ಇರುತ್ತದೆ. ಅಶೂರ್ ಖಾನಾ ಗಲ್ಲಿಯ ಪಶ್ಚಿಮ ದಿಕ್ಕಿನಲ್ಲಿ ಚಾಸಾ-1 ರವರ ಮನೆ ಇರುತ್ತದೆ. ನಿಪಿ-2 ನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಅದನ್ನು ನಾನು ಓದಿರುತ್ತೇನೆ. ಪೋಲಿಸರು ಚಾಸಾ-1 ರವರ

ಮನೆಯ ಬಳಿ ಬಂದು ನನ್ನ ಸಮಕ್ಷಮ ನಿಪಿ–2ರ ಪ್ರಕಾರ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1ರವರು ನನ್ನ ಪಕ್ಕದಮನೆಯವರಾದ್ದರಿಂದ ಅವರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದಾಗ ಠಾಣೆಯಲ್ಲಿ ನಿಪಿ–2ಕ್ಕೆ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**